ಎಮ್.ವಿ.ಸಿ. 2503/2022
RW. 01

ದಿನಾಂಕಃ 10-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಎದುರುದಾರ ಪರ ಶ್ರೀ. ಎಂ.ಡಿ.ಟಿ. ವಕೀಲರಿಂದಃ

7. ನಾನು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಲು ಕೋರುತ್ತೇನೆ.

1. ಅಧಿಕಾರ ಪತ್ರ ಅದನ್ನು ನಿಆರ್-1

2. ಇನ್ಸುರನ್ಸ ಪಾಲಿಸಿ ನಿಆರ್-2

3. ಆನಲೈನ್ ಮುಖಾಂತರ ಪಡೆದ 3ನೇ ಆರೋಪಿಯ ಚಾಲನಾ ಪರವಾನಿಗೆಯನ್ನು ಅರ್ಜಿದಾರ ಪರ ವಕೀಲರ ಆಕ್ಷೇಪಣೆ ಮೇರೆಗೆ ನಿಆರ್-3 ಅಂತಾ ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರ ಪರ ಶ್ರೀ. ಎಸ್.ಟಿ.ಎನ್ ವಕೀಲರಿಂದ**

8. ನಾನು ಪೊಲೀಸ ದಾಖಲೆಗಳನ್ನು ಆಧರಿಸಿ ಸಾಕ್ಷಿ ನುಡಿಯುತ್ತಿದ್ದೇನೆ ಬದಲಿಗೆ ನನಗೆ ಈ ಪ್ರಕರಣದಲ್ಲಿ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ದೋಷಾರೋಪಣಾ ಪಟ್ಟಿಯನ್ನು ಯಾವುದೇ ನ್ಯಾಯಾಲಯದಲ್ಲಿ ನಾನು ಪ್ರಶ್ನೆ ಮಾಡಿಲ್ಲ. ಮೃತ ಸುಶಾಂತ ಅವರು ಒಬ್ಬರೇ ದ್ವಿಚಕ್ರ ವಾಹನವನ್ನು ಅಪಘಾತ ಕಾಲಕ್ಕೆ ಚಲಾಯಿಸುತ್ತಿದ್ದರು ಎಂದರೆ ಸರಿ.

9. ಆ ದಿವಸ ಮೃತ ಹಾಗೂ ಆತನ ಗೆಳೆಯರು ಒಟ್ಟು 9 ಜನ ಎಲ್ಲರೂ ಸೇರಿ 5 ದ್ವಿಚಕ್ರ

ವಾಹನಗಳಲ್ಲಿ ಜೋಗ ಜಲಪಾತ ನೋಡಲು ಪ್ರಯಾಣಿಸುತ್ತಿದ್ದರು ಎಂದರೆ ಸರಿ. ಮೋಟಾರ ಸೈಕಲ ಸಂಖ್ಯೆ ಕೆಎ-52-ಎಸ್-6737 ಮೃತರ ವಾಹನಕ್ಕೆ ಅಪಘಾತಪಡಿಸಿದ ಕಾರಣ ಸದರಿ ಅಪಘಾತ ಆಗಿ ಅರ್ಜಿದಾರನ ಮಗ ಮೃತಪಟ್ಟರು ಎಂದರೆ ಸರಿಯಲ್ಲ.

10. ದೋಷಾರೊಪಣಾ ಪತ್ರದಲ್ಲಿ 2ನೇ ಆರೋಪಿಯ ಹೆಸರು ಸನ್ನದಕುಮಾರ ಅಂತಾ ತೋರಿಸಲಾಗಿದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿ ಹೆಸರು ತಪ್ಪಾಗಿ ನಮೂದು ಆಗಿದೆ ಎಂದು ನುಡಿಯುತ್ತಾರೆ.

11. ಮೋಟಾರ ಸೈಕಲ ನಂ.ಕೆಎ-53-ಹೆಚ್.ಬಿ.-0210 ವಾಹನ ಮೃತರ ವಾಹನಕ್ಕೆ ಹಾಗೂ 2ನೇ ಆರೋಪಿ ವಾಹನಕ್ಕೆ ಅಪಘಾತಪಡಿಸಿದ ಕಾರಣ ಸದರಿ ಅಪಘಾತ ಆಗಿ ಅರ್ಜಿದಾರನ ಮಗ ಮೃತಪಟ್ಟರು ಎಂದರೆ ಸರಿಯಲ್ಲ.

12. ದೋಷಾರೊಪಣಾ ಪತ್ರದಲ್ಲಿ 3ನೇ ಆರೋಪಿಯ ಹೆಸರು ಮಲ್ಲಿಕಾರ್ಜುನ ಮಾಕಿ ಅಂತಾ ತೋರಿಸಲಾಗಿದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿ ಹೆಸರು ತಪ್ಪಾಗಿ ನಮೂದು ಆಗಿದೆ ಎಂದು ನುಡಿಯುತ್ತಾರೆ.

13. ಮೋಟಾರ ಸೈಕಲ ನಂ.ಕೆಎ-53-ಹೆಚ್.ಬಿ.-0210 ರಲ್ಲಿ ಸುಧೀಂದ್ರ ಕುಲಕರ್ಣಿ ಎಂಬುವವರು ಹಿಂಬದಿ ಸವಾರನಾಗಿ ಕುಳಿತಿದ್ದರು ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ 3 ಗಾಡಿಗಳಲ್ಲಿ ಚಲಾಯಿಸುತ್ತಿದ್ದವರಿಗೆ ಗಾಯ ಆಗಿದೆ ಎಂದರೆ ಸರಿಯಲ್ಲ. ಸುಧೀಂದ್ರ ಕುಲಕರ್ಣಿ ಅವರನ್ನು ಸುಳ್ಳು ಮಾಹಿತಿ ಕೊಟ್ಟು ದೂರು ದಾಖಲಿಸಿದ್ದಕ್ಕೆ, 4ನೇ ಆರೋಪಿ ಎಂದು ದೋಷಾರೋಪಣಾ ಪತ್ರದಲ್ಲಿ ನಮೂದು ಇದೆ ಎಂದರೆ ಸರಿಯಲ್ಲ.

14. ಸದರಿ ಪ್ರಕರಣದಲ್ಲಿ ಪೊಲೀಸರು ಯಾರ ಯಾರ ಹೇಳಿಕೆಗಳನ್ನು ತೆಗೆದುಕೊಂಡಿದ್ದಾರೆ

ಎಂದು ನನಗೆ ಗೊತ್ತಿಲ್ಲ. ಮೋಟಾರ ಸೈಕಲ ನಂ.ಕೆಎ-53-ಹೆಚ್.ಬಿ.-0210 ಅದರ ವಿಮೆ ಅಪಘಾತ ಕಾಲಕ್ಕೆ ಚಾಲ್ತಿಯಲ್ಲಿ ಇತ್ತು ಎಂದರೆ ಸಾಕ್ಷಿ ನಿಯಮ ಮತ್ತು ನಿಬಂಧನೆಗೆ ಒಳಪಟ್ಟು ಚಾಲ್ತಿಯಲ್ಲಿ ಇತ್ತು ಎಂದು ನುಡಿಯುತ್ತಾರೆ. ಪರಿಹಾರ ಕೊಡಲು ಬಾಧ್ಯಸ್ಥರಾದರೂ ಸಹ ಸದರಿ ಪರಿಹಾರ ಕೊಡಬಾರದು ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2ನೇ ಎದುರುದಾರ ಪರ ಶ್ರೀ. ಎಸ್.ಬಿ.ಸಿ. ವಕೀಲರಿಂದ**

15. ಸದರಿ ಅಪಘಾತವನ್ನು ನಾನು ಕಣ್ಣಾರೆ ಕಂಡಿಲ್ಲ. ಈ ಪ್ರಕರಣದಲ್ಲಿ ನನಗೆ ಸಮನ್ಸ ಜಾರಿಯಾದ ಬಳಿಕೆ ನಾವು ಯಾವುದೇ ತನಿಖೆ ಮಾಡಿಸಿಲ್ಲ. ಆದರೆ ದಾಖಲೆಗಳನ್ನು ಪಡೆದುಕೊಂಡಿದ್ದೇವೆ. ನಮ್ಮ ಕಂಪನಿಗೆ ಯಾವುದೇ ಪ್ರಕರಣ ಬಂದಲ್ಲಿ ನಮ್ಮಲ್ಲಿ ಯಾವುದೇ ಖಾಸಗೀ ತನಿಖೆ ತಂಡ ಇರುವುದಿಲ್ಲ. ನಮ್ಮಲ್ಲಿ ಆ ರೀತಿ ತನಿಖೆ ಮಾಡಲು ವ್ಯಕ್ತಿಗಳು ಇರುತ್ತಾರೆ ಅಂದರೆ ಸರಿಯಲ್ಲ.

16. ಸದರಿ ಪ್ರಕರಣದಲ್ಲಿ ಪೊಲೀಸ ದಾಖಲೆಗಳನ್ನು ನಾವು ಏಜಂಟ್ಸ ಅವರ ಮುಖಾಂತರ ಪಡೆದುಕೊಂಡಿರುತ್ತೇವೆ. ಸದರಿ ದಾಖಲೆಗಳನ್ನು ಪಡೆದುಕೊಳ್ಳಲು ಏಜಂಟ ಗಳಿಗೆ ನಾವು ಅಧಿಕಾರ ಪತ್ರ ನೀಡಿರುತ್ತೇವೆ. ನಮ್ಮ ಕಂಪನಿಯಿಂದ ಏಜಂಟರವರ ಹೆಸರನ್ನು ಈಗ ಹೇಳಲು ಬರುವುದಿಲ್ಲ. ಪೊಲೀಸ ದಾಖಲೆಗಳು ಕೂಡಿದಂತೆ ಸಂಪೂರ್ಣ ದೋಷಾರೋಪಣೆ ಪಟ್ಟಿಯನ್ನು ಏಜಂಟ ನಮಗೆ ತಂದು ಕೊಟ್ಟಿರುತ್ತಾರೆ. ಏಜಂಟ ರವರು ತಮ್ಮ ಪತ್ರದೊಂದಿಗೆ ಸದರಿ ಪೊಲೀಸ ದಾಖಲೆಗಳನ್ನು ನಮಗೆ ನೀಡುತ್ತಾರೆ. ಏಜಂಟ ರವರು ನೀಡಿದ ಪತ್ರ ಈಗ ನನ್ನ ಬಳಿ ಇಲ್ಲ.

17. ನಮ್ಮ ಕಂಪನಿಯ ಪ್ರಕರಣಗಳಿಗೆ ಸಂಬಂಧಪಟ್ಟ ಆಫೀಸ ಪೈಲನಲ್ಲಿ ಪ್ರಕರಣಗಳ ಸಂಪೂರ್ಣ ದಾಖಲೆಗಳು ಇರುತ್ತವೆ. ಏಜಂಟರವರು ನೀಡಿದ ಪತ್ರವನ್ನು ನ್ಯಾಯಾಲಯಕ್ಕೆ ತಂದು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಸದರಿ ಪತ್ರದಲ್ಲಿ ಅಪಘಾತ ಯಾವ ಕಾರಣಕ್ಕೆ ಯಾರಿಂದ ಆಗಿದೆ ಎನ್ನುವ ಅಂಶಕ್ಕೆ ಏನನ್ನೂ ಬರದಿರುವುದಿಲ್ಲ.

18. ನಾನು ಕಳೆದ 1 ವರ್ಷದಿಂದ ಸದರಿ ವಿಮಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಇದಕ್ಕೂ ಮೊದಲು ನಾನು 2 ವರ್ಷ ವಕೀಲರಾಗಿ ವೃತ್ತಿ ನಡೆಸುತ್ತಿದ್ದೆ. ಸುಮಾರು 20 ಪ್ರಕರಣಗಳಲ್ಲಿ ನಾನು ಕಂಪನಿ ಪರವಾಗಿ ಸಾಕ್ಷಿ ನುಡಿದಿರುತ್ತೇನೆ. ಏಜಂಟರವರು ನೀಡಿದ ಪೊಲೀಸ ದಾಖಲೆಗಳನ್ನು ಆಧರಿಸಿ ಈ ಪ್ರಕರಣದಲ್ಲಿ ನಾವು ತಕರಾರು ಸಲ್ಲಿಸಿರುತ್ತೇವೆ. ಸದರಿ ಪ್ರಕರಣದಲ್ಲಿ ಎಫ್.ಐ.ಆರ್ ಮತ್ತು ದೂರನ್ನು ನಾನು ಓದಿರುತ್ತೇನೆ.

19. ದೂರು ಮತ್ತು ಪ್ರವವ ನ್ನು ಆಧರಿಸಿ ಪೊಲೀಸರು ತನಿಖೆಯನ್ನು ಆರಂಭಿಸುತ್ತಾರೆ ಎಂದರೆ ಸರಿ. ಮೃತ ಮತ್ತು ಆತನ ಗೆಳೆಯರು ಬೆಂಗಳೂರಿನಿಂದ ಹೊರಟು ಜೋಗ ಫಾಲ್ಸ ನೋಡಲು ಹೋಗುತ್ತಿದ್ದರು ಎಂದರೆ ಸರಿ.

20. ಮೃತರಾದ ಸುಶಾಂತ ಚಂದ್ರಶೇಖರ ಪುರಂದರೆ ಅವರು ಅವರ ಅಜಾಗರೂಕತೆಯಿಂದ ವಾಹನ ಚಲಾಯಿಸುವಾಗ ಸ್ಕಿಡ್ ಆಗಿ ಬಿದ್ದು ಸದರಿ ಅಪಘಾತ ಆಗಿದೆ ಎಂದು ದೂರಿನಲ್ಲಿ ನಮೂದು ಇದೆ ಎಂದರೆ ಸರಿ. ನಮಗೆ ಏಜಂಟ ಅವರು ನೀಡಿದ ದಾಖಲೆಗಳಲ್ಲೂ ಅದೇ ರೀತಿ ನಮೂದು ಇದೆ. ಪೊಲೀಸ ದಾಖಲೆಗಳನ್ನು ನೋಡಿದ ಮೇಲೆ ಮೃತರು ತಾವಾಗಿಯೇ ಬಿದ್ದು ಸದರಿ ಅಪಘಾತ ಸಂಭವಿಸಿದೆ ಅಂತಾ ಕಂಡು ಬರುತ್ತದೆ ಎಂದರೆ ಸರಿ.

21. ಕಲಂ 158(6) ರ ಪ್ರಕಾರ ಪೊಲೀಸರು ನಮ್ಮ ಕಂಪನಿಗೆ ಯಾವುದೇ ದಾಖಲೆಗಳನ್ನಾಗಲೀ ಮಾಹಿತಿಯನ್ನಾಗಲೀ ಸಲ್ಲಿಸಿರುವುದಿಲ್ಲ. ಸದರಿ ಅಪಘಾತ ಮೃತನ ಬೇಜವಾಬ್ದಾರಿತನದಿಂದಲೇ ಆಗಿದೆ ಎಂದರೆ ಸರಿ. ಸದರಿ ಅಪಘಾತದಲ್ಲಿ ಬೇರೆ ಯಾವುದೇ ವಾಹನ ಚಾಲಕರ ತಪ್ಪು ಇಲ್ಲ ಎಂದರೆ ಸರಿ. ಮೃತರು ವೇತನ ಪಡೆಯುವರು ಆದ ಕಾರಣ ಅರ್ಜಿದಾರರು ಪೊಲೀಸರ ಮೇಲೆ ಪ್ರಭಾವ ಬೀರಿದ ಕಾರಣ, ಪೊಲೀಸರು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ.

22. ನನ್ನ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ 5 ರಲ್ಲಿ ನಮೂದು ಇರುವಂತೆ ಸದರಿ ಅಂಶವನ್ನು ನಾವು ಒಪ್ಪುತ್ತೇವೆ. ಸದರಿ ಅಂಶವನ್ನು ದೋಷಾರೋಪಣಾ ಪಟ್ಟಿಯಲ್ಲಿ ನಮೂದು ಇರುವಂತೆ ನಾವು ಹೇಳಿರುತ್ತೇವೆ. ಈ ಪ್ರಕರಣದಲ್ಲಿ ಪೊಲೀಸರು ಪ್ರತ್ಯಕ್ಷ ಸಾಕ್ಷಿ ಆಗಿರುವುದಿಲ್ಲ ಎಂದರೆ ಸರಿ.

23. ವಾಹನ ಚಾಲಕರಾದ 3ನೇ ಆರೋಪಿ ಮಲ್ಲಿಕಾರ್ಜುನ ಮಾಕಿ ಮತ್ತು ವಾಹನ ಮಾಲೀಕರಾದ ರಾಜಶೇಖರ ಅದೃಶ್ಯಯ್ಯ ಹಿರೇಮಠ ಅವರನ್ನು ಅವರ ಸಾಕ್ಷ್ಯ ಮಾಡಿಸಲು ಯಾವುದೇ ತೊಂದರೆ ಇಲ್ಲ. ಅಪಘಾತ ಆದ ಸ್ಥಳದ ಪೊಟೋವನ್ನು ಪೊಲೀಸರಾಗಲೀ, ನಮ್ಮ ಏಜಂಟಗಳಾಗಲೀ ತೆಗೆದಿರುವುದಿಲ್ಲ.

24. ಸದರಿ ಅಪಘಾತದಲ್ಲಿ 1ನೇ ಎದುರುದಾರರ ಬೈಕ್ ಹಾಗೂ 3ನೇ ಎದುರುದಾರರ ಬೈಕಗೆ ಯಾವುದೇ ಜಖಂ ಆಗಿಲ್ಲ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಯಾವುದೇ ಎದುರುದಾರರೂ ಸಹ ಅರ್ಜಿದಾರರಿಗೆ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿ. ಪ್ಯಾರಾ–5 ರಲ್ಲಿ ನಮೂದು ಇರುವಂತೆ ನಾವು ಹೇಳಿರುವ ಅಂಶ ಕಾಲ್ಪನಿಕ ಆದದ್ದು ಎಂದರೆ

ಸರಿಯಲ್ಲ.

25. ನಮ್ಮ ಕಂಪನಿಯ ಏಜಂಟ ರವರಿಂದ ಖಾಸಗಿ ತನಿಖೆ ಮಾಡಿಸಿ ಅವರಿಂದ ಎಲ್ಲ ಮಾಹಿತಿಯನ್ನು ಪಡೆದು ಅವರು ನೀಡಿದ ರಿಪೋರ್ಟ ಆಧಾರದ ಮೇಲೆ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ದಾಖಲೆಗಳನ್ನಾಧರಿಸಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ. ಏಜಂಟರವರು ನೀಡಿದ ರಿಪೋರ್ಟನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಲ್ಲಿ ಮುಖ್ಯ ವಿಚಾರಣೆ ಪ್ಯಾರಾ–5 ರಲ್ಲಿ ಇರುವ ಅಂಶ ಸುಳ್ಳಾಗಿ ಹೊಗುತ್ತವೆ ಎನ್ನುವ ಕಾರಣಕ್ಕೆ ರಿಪೋರ್ಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1, 3, 5 ಮತ್ತು 6 ನೇ ಎದುರುದಾರ ಪರ ವಕೀಲರಿಂದ**

**1, 3, 5 ಮತ್ತು 6 ನೇ ಎದುರುದಾರ ಪರ ವಕೀಲರು ಗೈರು ಹಾಜರು ಇದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.